**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 62K– ತೃತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80** **ಸಮಯ : 03.00 ಗಂಟೆಗಳು**

*********************************************************************************

**ಅಭ್ಯಾಸ ಪತ್ರಿಕೆ–5**

*********************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 8 x 1=8**

1. 'ಟ' ವರ್ಗದ ಐದನೆಯ ಅಕ್ಷರವನ್ನು ಹೀಗೆಂದು ಕರೆಯುತೇವೆ
   ಎ) ಮಹಾಪ್ರಾಣ ಬಿ) ಅಲ್ಪಪ್ರಾಣ
   ಸಿ) ಅನುಸ್ವಾರ ಡಿ) ಅನುನಾಸಿಕ
2. 'ಮುಕ್ಕಣ್ಣು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
   ಎ) ಕ್ರಿಯಾ ಬಿ) ತತ್ಪುರಷ
   ಸಿ) ಕರ್ಮಧಾರೆಯ ಡಿ) ದ್ವಿಗು
3. 'ಕವಯಿತ್ರಿ' ಪದದ ಅನ್ಯಲಿಂಗ ರೂಪ
   ಎ) ಕವಿ ಬಿ) ಪಂಡಿತ
   ಸಿ) ಕಬ್ಬಿಗ ಡಿ) ಸಾಹಿತಿ
4. ಕೆಳಗಿನವುಗಳಲ್ಲಿ ಅನ್ವರ್ಥಕನಾಮಕ್ಕೆ ಉದಾಹರಣೆಯಾದ ಪದ
   ಎ) ತಂದೆ ಬಿ) ಮನುಷ್ಯ
   ಸಿ) ವೈದ್ಯ ಡಿ) ಹುಡುಗ
5. ಕರ್ನಾಟಕದ ಪಶ್ಚಿಮಘಟ್ಟ ಶ್ರೇಣಿಯ ತಂಪು ಹವಾಮಾನದಲ್ಲಿ ಗೌರಮ್ಮನವರು ಬೆಳೆದರು – ಈ ವಾಕ್ಯದಲ್ಲಿ ಷಷ್ಠೀ ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದ
   ಎ) ಹವಾಮಾನದಲ್ಲಿ ಬಿ) ಕರ್ನಾಟಕದ
   ಸಿ) ಗೌರಮ್ಮನವರು ಡಿ) ಪಶ್ಚಿಮಘಟ್ಟ
6. ಬರವಣಿಗೆಯಲ್ಲಿ ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸುವ ಲೇಖನಚಿಹ್ನೆ
   ಎ) ಭಾವಸೂಚಕ ಬಿ) ಉದ್ಧರಣ
   ಸಿ) ಆವರಣ ಡಿ) ವಿವರಣಾತ್ಮಕ
7. ಸಂಸ್ಕೃತ ಭಾಷೆಯಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದ
   ಎ) ಋಣ ಬಿ) ಮೇಜು
   ಸಿ) ರೈತ ಡಿ) ಕಾಗದ
8. ಸಮುದ್ರದ ದೊಡ್ಡದೊಡ್ಡ ಅಲೆಗಳು ರಪರಪನೆ ರಭಸವಾಗಿ ಬಂದು ದಂಡೆಗೆ ಅಪ್ಪಳಿಸುತ್ತಿದ್ದವು – ಇಲ್ಲಿ ಬಳಕೆಯಾಗಿರುವ ದ್ವಿರುಕ್ತಿ ಪದ
   ಎ) ರಪರಪನೆ ಬಿ) ದೊಡ್ಡದೊಡ್ಡ
   ಸಿ) ಅಪ್ಪಳಿಸುತ್ತಿದ್ದವು ಡಿ) ರಭಸವಾಗಿ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 x 1=4**

9. ಔರಂಗಜೇಬನ ಮಗ : ಅಜಮತಾರ :: ದೇಸಾಯಿ ಈಶಪ್ರಭುಗಳ ಮಗ : ––––––––––––––––––

10. ‘ಸಂಧ್ಯಾರಾಗ’ ಕೃತಿಯ ಕರ್ತೃ : ಅ.ನ.ಕೃಷ್ಣರಾಯ :: ‘ರತ್ನನಪದಗಳು ಕೃತಿಯ ಕರ್ತೃ : -----------
11. ಜಾತಿ ಇಲ್ಲದ ಭೀತಿ ಇಲ್ಲದ : ಬಾಳ ಕಟ್ಟತೇವ :: ಕ್ರಾಂತಿ ಕೆಂಡದ ಕುಂಡ ಹೊತ್ತು ನಾವು : ----------
12. ಆಂಗ್ಲ ಆಫ್ರಿಕನ್ನರಲ್ಲಿ : ಹರಿವ ನೆತ್ತರೊಂದೆ :: ಅಕ್ಕಿ ರಾಗಿ ಬಿಳಿದು ಕರಿದು : ------------------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4x 1=4**

13. ಮೋಹನಪುರುದಲ್ಲಿ ನಡೆದ ಚಳುವಳಿ ಯಾವುದು?
14. ಜನಪದರು ಹೇಳಿರುವಂತೆ ಕೆರೆಗಳು ಯಾವ ಮಳೆಯಿಂದ ತುಂಬುತ್ತವೆ?
15. ಕವಿ ಸೋಮನಾಥನು ಯಾರನ್ನು ದೊಡ್ಡ ಮನುಷ್ಯನೆಂದು ಹೆಸರಿಸಲಾಗುವುದಿಲ್ಲ ಎಂದಿದ್ದಾನೆ?
16. ಬಸ್ ಪ್ರಯಾಣದ ವೇಳೆ ಲೇಖಕರಿಗೆ ನೆನಪಿಗೆ ಬಂದ ಕಾವ್ಯಾನಂದರ ಪದ್ಯದ ಸಾಲುಗಳು ಯಾವುವು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8x2=16**

17. ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಉಪಚರಿಸಿದ ಬಗೆ ಹೇಗೆ? ವಿವರಿಸಿರಿ.
18. ಗಾಂಧೀಜಿಯವರು ಗೌರಮ್ಮನವರ ಮನೆಗೆ ಹೋಗಲು ಕಾರಣವಾದ ಪ್ರಸಂಗವನ್ನು ತಿಳಿಸಿರಿ.
19. ಗಾಂಧೀಜಿಯವರು ಅವಾಕ್ಕಾಗಲು ಕಾರಣವಾದ ಘಟನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
20. ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತು ಹೋಗಿತ್ತು?
21. ಗ್ರಂಥಾಲಯವನ್ನು ಹೊಕ್ಕಾಗ ಕವಿಗೆ ಆದ ಅನುಭವವನ್ನು ತಿಳಿಸಿರಿ.
22. ಕವಿ ಸಿ.ಪಿ.ಕೆ ಯವರು ಗ್ರಂಥಾಲಯದಲ್ಲಿ ಭೀತವಿಸ್ಮಿತರಾಗಿ ನಿಂತಿದ್ದು ಏಕೆ?.
23. ಡಾಂಭಿಕನ ಭಕ್ತಿ ಬದಿಯಲ್ಲಿದ್ದವರಿಗೆ ಏಕೆ ಆಶ್ಚರ್ಯವನ್ನುಂಟು ಮಾಡುತ್ತದೆ?
24. ಶಿಲ್ಪಿಯು ಧರ್ಮಪದನಿಗೆ ವಿಷ ಉಣಿಸಲು ಕಾರಣವೇನು?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2x3=6**

25. “ಇದು ನಮ್ಮ ಕೊನೆಯ ಭೇಟಿ”
26. “ಕರ್ನಾಟಕ ವಂಗ ಆಂಧ್ರ ಭಾರತೀಯರೊಂದೆ.”

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4x3=12**

27. ಶರೀಫರು ಮತ್ತು ಗೋವಿಂದಭಟ್ಟರ ಅನ್ಯೋನ್ಯತೆಯನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.
28. ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು?
29. ಮಳೆದೇವರಲ್ಲಿ ರೈತನು ಪ್ರಾರ್ಥನೆಯನ್ನು ಮಾಡಿಕೊಳ್ಳಲು ಕಾರಣವೇನು?
30. ಸತೀಶ ಕುಲಕರ್ಣಿಯವರ ತಾರತಮ್ಯವಿಲ್ಲದ ಸಮಾಜ ನಿರ್ಮಾಣದ ಆಶಯವನ್ನು ಮೆಚ್ಚುವಂಥದ್ದು, ಏಕೆ?

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 2x3=6**

31. ಗೊರೂರು ರಾಮಸ್ವಾಮಿ ಅಯ್ಯಂಗಾರ್
32. ಸಿ.ಪಿ.ಕೃಷ್ಣಕುಮಾರ್

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ: 1x3=3**

33. “ಬೆಳೆಯುವ ಪೈರು ಮೊಳಕೆಯಲ್ಲಿ”

ಅಥವಾ

“ಶಕ್ತಿಗಿಂತ ಯುಕ್ತಿ ಮೇಲು”

**IX. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1x 4=4**

34. ಡಿ.ವಿ.ಜಿಯವರ ‘ಮಂಕುತಿಮ್ಮನ ಕಗ್ಗ’ ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣವೇನು? ವಿವರಿಸಿರಿ.

ಅಥವಾ

ಶಂ.ಬಾ.ಜೋಶಿಯವರ ‘ಯಕ್ಷಪ್ರಶ್ನೆ’ ಬೀಚಿಯವರ ಮನಸ್ಸನ್ನು ಸೂರೆಗೊಂಡಿತು ಏಕೆ? ವಿವರಿಸಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1x4=4**

35. ಕಳಬೇಡ, ಕೊಲಬೇಡ ----------------------------
-------------------------------------------
------------------------------ ಹಳಿಯಲು ಬೇಡ
-------------------------------------------
---------------- ಕೂಡಲಸಂಗಮದೇವರನೊಲಿಸುವ ಪರಿ

**ಅಥವಾ**

ದೇವಲೋಕ ----------------------------------
-------------------------------------------
-------------------------------------------
------------------------------ ನೀವೇ ಪ್ರಮಾಣು

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** **4x1=4**

ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರು ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ಮೇಲುಕೀಳೆಂಬ ತಾರತಮ್ಯವಿರಕೂಡದು. ವಿಜ್ಞಾನದ ಅನ್ವೇಷಣಕಾರ್ಯದಲ್ಲಿ ನಾವೆಲ್ಲಾ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೆ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೇ ಅನುಸರಿಸುವುದು ಸರ್ವಥಾಕೂಡದು. ಸ್ವಂತಿಕೆ ಇರಬೇಕು. ಹೊಸದಾರಿಯನ್ನು ಗುರುತಿಸಿ ಮುಂದುವರಿಯಬೇಕು. ಎಂದು ಒತ್ತಿಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದ ಕೂಡಲೇ ಒಂದು ಸುತ್ತು ಹೊರಟು ಎಲ್ಲಾ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ ಬೆನ್ನುತಟ್ಟಿ ಅವನನ್ನು ಎಲ್ಲರ ಎದುರು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಯನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

36. ಪ್ರಶ್ನೆಗಳು:
   1. ಸಿ.ವಿ.ರಾಮನ್ ತಾವು ಆರಿಸಿಕೊಂಡ ಶಿಷ್ಯನನ್ನು ಹೇಗೆ ನೋಡಿಕೊಳ್ಳುತ್ತಿದ್ದರು?
   2. ಸಿ.ವಿ.ರಾಮನ್ ತಮ್ಮ ಶಿಷ್ಯರನ್ನು ಸರಿಸಮಾನ ಕೆಲಸಗಾರರು ಎಂದು ಏಕೆ ಭಾವಿಸುತ್ತಿದ್ದರು?
   3. ಬೆಳಿಗ್ಗೆ ಪ್ರಯೋಗಾಲಕ್ಕೆ ಬಂದಕೂಡಲೇ ಸಿ.ವಿ.ರಾಮನ್‌ರ ದಿನಚರಿ ಏನಾಗಿತ್ತು?
   4. ಸಿ.ವಿ.ರಾಮನ್ ಶಿಷ್ಯನನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದುದು ಯಾವಾಗ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **4x1=4**

37. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

**ಅಥವಾ**

ಕಂಪ್ಯೂಟರ್ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವ

**XIII. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** **5 x 1=5**

38. ನಿಮ್ಮನ್ನು ಉಜಿರೆ ಗ್ರಾಮದ ನಿವಾಸಿ ಆರ್ಯವರ್ಧನ ಎಂದು ಭಾವಿಸಿಕೊಂಡು, ನಿಮ್ಮ ಊರಿನಲ್ಲಿ ಹಾಳಾದ ರಸ್ತೆಗಳನ್ನು ದುರಸ್ತಿಪಡಿಸುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ :

ಅಥವಾ

ನಿಮ್ಮನ್ನು ಸೋಮನಾಥಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಜ್ವಲ್ ಎಂದು ಭಾವಿಸಿಕೊಂಡು, ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಕೋಲಾರದಲ್ಲಿರುವ ನಿಮ್ಮ ತಾಯಿ ವೀಣಾ ಅವರಿಗೆ ಒಂದು ಪತ್ರವನ್ನು ಬರೆಯಿರಿ :

◉◉◉◉◉